CENTRAL LIBRARY

DECCAN HERALD
Thursday August 23, 2018
www.deccanherald.com



# Mandatory induction programme for varsity students

## To inculcate 'universal human values' like trust, love

Prakash Kumar

**TNEW DELHI, DHNS: Catch them young, seems to be the new mantra for the university grants commission (UGC) which is set to roll out a compulsory induction programme for the fresh undergraduate students in colleges and universities to primarily inculcate "universal human values" like trust, righteous conduct, love, non-violence and peace among them.**

The proposed three-week induction programme, scheduled to be launched across all universities and colleges from 2019 academic session, also seeks to inculcate values of "equality and responsibility towards one's fellow citizens of any caste, class or creed."

The UGC has issued comprehensive guidelines for the conduct of compulsory induction programmes.

The higher education regulator is gearing up to hold a series of regional workshops for the faculty members of the universities and colleges in November-December this year to prepare them for an effective implementation of the programme.

"Methodology of mentoring this content is extremely important. It must not be through do's and don'ts, but by getting students to explore and think by engaging them in a dialogue. It is best taught through group discussions and real-life activities rather than lecturing," the UGC's guide for the proposed programme stipulates.

While the proposed induction programme will be compulsory for all newly-enrolled students for the first three weeks of their joining the college, the UGC has asked the heads of the universities and colleges to consider continuing the students mentoring activities throughout the entire duration of their undergraduate programme.

The mentor groups, which will comprise senior students, should meet with their "faculty mentors" for an hour every week within the same semester after the induction is over and in subsequent semesters.

At the start of the subsequent semesters, three days should be set aside "for full days of activities" as a follow up of the previous sessions.

"Show inspiring films, arrange collective artwork and cultural programme, conduct group discussions, and organize lectures by eminent people. Subsequently, the group discussions can also be arranged once a month," the UGC added.

During the induction programmes and their follow up sessions, the students will be exposed to the Indian philosophical concepts on Nyaya (justice), Vishwas (trust), Samman (respect), Sneha (affection), Mamata (care), with real-life examples and activities.

CENTRAL LIBRARY

DECCAN HERALD
Thursday August 23, 2018
www.deccanherald.com



# 21,000 engineering seats in state unallotted

## There is zero admission in 33 private colleges: COMED-K

Sandesh M S

**BENGALURU: Demand for engineering programmes seems to be fast diminishing with 21,000 seats, out of 64,000 seats available, remaining unallotted this year.**

According to COMED-K data, there is zero admission in 33 private colleges. Out of 16,236 seats available through COMED-K for 2018-19, only 10,175 seats are filled. About 40% seats in COMED-K are unallotted.

The number of vacant seats may go up as counselling for medical, dental and AYUSH programmes is yet to take place.

"A few engineering students may give up their seats and opt for medical programmes. It means the number of vacant seats in engineering will go up. Clear picture will emerge once counselling for all courses concludes," Gangadaraiah, Administrative Officer, Karnataka Examinations Authority told *DH*.

"Number of unallotted seats is increasing every year. Last year 18,000 remained unallotted. There is no other way these seats can be filled as the last date for admissions is already over," he added.

Many reasons are attributed for decrease in the demand for the engineering. Slump in employment opportunities and sharp hike in fee structure have been identified as primary reasons.

"Employers prefer BCA graduates to engineering graduates. Some students are very particular about a set of colleges to pursue the engineering for placement reasons. They give up their seats and pursue other undergraduate programmes," he said.

Only a few students voluntarily opt for the engineering courses," Gangadaraiah added.

**DH News Service**

ಗುರುವಾರ 23.8.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 234 • ಪುಟ 12+4 • ಬೆಲೆ ₹5
epaper.kannadaprabha.in

ಆಮ್ ಆದ್ಮಿ ಪಾರ್ಟಿಯಿಂದ ಮತ್ತೊಬ್ಬ ನಾಯಕ ಹೊರಕ್ಕೆ ↘9

3ನೇ ಟೆಸ್ಟ್: ಭಾರ
203 ರನ್ ಗೆಲು

ಕನ್ನಡಪ್ರಭ
ನೇರ. ದಿಟ್ಟ. ನಿರಂತರ

CENTRAL LIBRARY



ಮಹಿಳಾ ಕ್ರೀ
ಗಳಿಕೆ: ಸಿಂಧು
ಫೋರ್ಬ್ಸ್‌ನಿಂದ ಜಾಗ
ಭಾರತದ ಬ್ಯಾಡ್ಮಿಂಟನ
ವಾರ್ಷಿಕ ಗಳಿಕೆ ₹59 ಕ
ಸೆರೆನಾ ವಿಲಿಯಮ್ಸ್

# ಕಳಪೆ ತಾಂತ್ರಿಕ ಕಾಲೇಜುಗಳಿಗೆ ವಿದ್ಯಾರ್ಥಿಗಳಿಂದಲೇ 'ಪಾಠ'

ರಾಜ್ಯದ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ವರ್ಷ ಸರ್ಕಾರಿ ಕೋಟಾದ ಸೀಟು ಹಾಗೂ ಕಾಮೆಡ್-ಕೆ ಸೀಟುಗಳು ಸೇರಿ ಒಟ್ಟಾರೆ ಸುಮಾರು 27000 ಸೀಟುಗಳು ಖಾಲಿ ಉಳಿದಿವೆ. ಇದು ಇತ್ತೀಚಿನ ವರ್ಷಗಳಲ್ಲೇ ಅತ್ಯಧಿಕ. ಸರ್ಕಾರಿ ಹಾಗೂ ಕಾಮೆಡ್-ಕೆ ಕೌನ್ಸೆಲಿಂಗ್‌ನಲ್ಲಿ 33 ಖಾಸಗಿ ಕಾಲೇಜುಗಳನ್ನು ಒಬ್ಬ ವಿದ್ಯಾರ್ಥಿಯೂ ಆಯ್ಕೆ ಮಾಡಿಕೊಂಡಿಲ್ಲ. ಅಂದರೆ, ಆ ಎಂಜಿನಿಯರಿಂಗ್ ಕಾಲೇಜುಗಳು ಈ ವರ್ಷ ಬಾಗಿಲು ತೆಗೆಯುವುದೇ ಇಲ್ಲ. ಹೀಗೆ ಶೂನ್ಯ ಪ್ರವೇಶ ಪಡೆದ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಕೂಡ ಈ ವರ್ಷವೇ ಹೆಚ್ಚು. ಈ ವಿದ್ಯಮಾನ ಏನನ್ನು ಹೇಳುತ್ತದೆ? ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳು ನಾಯಿಕೊಡೆಗಳಂತೆ ತಲೆಎತ್ತುತ್ತಿವೆ, ದುಡ್ಡು ಮಾಡುವುದಕ್ಕೆಂದೇ ಶ್ರೀಮಂತರು ಇಂತಹ ಕಾಲೇಜುಗಳನ್ನು ತೆರೆಯುತ್ತಿದ್ದಾರೆ, ಇಲ್ಲಿ ಮೂಲಸೌಕರ್ಯ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಮಹತ್ವ ನೀಡದೆ ಕೇವಲ ಹಣವನ್ನು ಮಾತ್ರ ನೋಡಲಾಗುತ್ತದೆ ಎಂಬ ಕೆಲ ವರ್ಷಗಳಿಂದ ಇರುವ ಆರೋಪವನ್ನು ಈ ವರ್ಷದ ಬೆಳವಣಿಗೆ ಇನ್ನಷ್ಟು ಪುಷ್ಟೀಕರಿಸುತ್ತದೆ. ಕಳೆದ ವರ್ಷ ರಾಜ್ಯದಲ್ಲಿ ಸುಮಾರು 19000 ಎಂಜಿನಿಯರಿಂಗ್ ಸೀಟುಗಳು ಖಾಲಿ ಉಳಿದಿದ್ದವು. ಅದಕ್ಕೂ ಹಿಂದಿನ ವರ್ಷ 9000, ಅದಕ್ಕಿಂತ ಹಿಂದಿನ ವರ್ಷ 13000 ಸೀಟುಗಳು ಖಾಲಿ ಉಳಿದಿದ್ದವು. ಅವುಗಳಿಗೆ ಹೋಲಿಸಿದರೆ ಈ ವರ್ಷ ಅತಿ ಹೆಚ್ಚು ಸೀಟುಗಳು ಉಳಿದಿವೆ.

ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ, ಅವುಗಳಲ್ಲಿರುವ ಕೋರ್ಸುಗಳ ಸಂಖ್ಯೆ ಹಾಗೂ ಅವುಗಳಿಗೆ ಪ್ರವೇಶ ಪಡೆಯಲು ಪಡೆದಿರುವ ವಿದ್ಯಾರ್ಥಿಗಳ ಸಂಖ್ಯಾ ಮಿತಿ ಮಿತಿ ಎಲ್ಲವೂ ಜಾಸ್ತಿಯಾಗಿವೆ. ಮಾಹಿತಿ ತಂತ್ರಜ್ಞಾನ, ಸಿವಿಲ್, ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಂತಹ ಕೆಲ ಕೋರ್ಸ್‌ಗಳನ್ನು ಹೊರತುಪಡಿಸಿದರೆ ಇನ್ನುಳಿದ ಕೋರ್ಸುಗಳಿಗೆ ಇತ್ತೀಚಿನ ವರ್ಷಗಳಲ್ಲಿ ಬೇಡಿಕೆ ಕಡಿಮೆಯಾಗಿದೆ. ಹಾಗಿದ್ದರೂ ಪ್ರತಿ ವರ್ಷ ಹೊಸ ಹೊಸ ಎಂಜಿನಿಯರಿಂಗ್ ಕಾಲೇಜುಗಳು ಆರಂಭವಾಗುತ್ತಲೇ ಇವೆ. ಇವುಗಳಲ್ಲಿ ಮೂಲಸೌಕರ್ಯವಿಲ್ಲದ ಹಾಗೂ ಒಳ್ಳೆಯ ಬೋಧನೆಯ ಇತಿಹಾಸವಿಲ್ಲದ ಕಾಲೇಜುಗಳನ್ನು ವಿದ್ಯಾರ್ಥಿಗಳೇ ನಿರಾಕರಿಸುತ್ತಿದ್ದಾರೆ.

> ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ಬಾರಿ 27000 ಸೀಟು ಖಾಲಿ ಉಳಿದಿವೆ. 33 ಕಾಲೇಜುಗಳಿಗೆ ಯಾರೂ ಪ್ರವೇಶವೇ ಪಡೆದಿಲ್ಲ, ಎಐಸಿಟಿಇ ಕೆಲಸವನ್ನು ಇದೀಗ ವಿದ್ಯಾರ್ಥಿಗಳೇ ಮಾಡಿದ್ದಾರೆ.

ದೇಶದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ನಿರ್ಧಾರಗಳಿಗೆ ಪರಮೋಚ್ಚ ಸಂಸ್ಥೆಯೆಂದರೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ). ಇದು ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಆರಂಭಿಸಲು ಹಾಗೂ ಈಗಾಗಲೇ ಇರುವ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹೊಸ ಕೋರ್ಸುಗಳನ್ನು ಆರಂಭಿಸಲು ಅನುಮತಿ ನೀಡುತ್ತದೆ. ಹಾಗೂ ಪ್ರತಿ ವರ್ಷ ಎಂಜಿನಿಯರಿಂಗ್ ಕಾಲೇಜುಗಳಿಗೆ ಮಾನ್ಯತೆ ನವೀಕರಿಸುತ್ತದೆ ಅಥವಾ ಕಳಪೆ ನಿರ್ವಹಣೆಯ ಕಾಲೇಜುಗಳನ್ನು ಮುಚ್ಚಲು ಸೂಚಿಸುತ್ತದೆ. ಎಐಸಿಟಿಇ ಅಧಿಕಾರಿಗಳು ಖುದ್ದಾಗಿ ಕಾಲೇಜುಗಳನ್ನು ಪರೀಕ್ಷಿಸಿ ತಮ್ಮ ಕೆಲಸವನ್ನು ದಕ್ಷವಾಗಿ ಮಾಡಿದ್ದರೆ ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳ ಹಾಗೂ ಪ್ರವೇಶಾಕಾಂಕ್ಷಿಗಳ ಅನುಪಾತದಲ್ಲಿ ಇಷ್ಟೊಂದು ದೊಡ್ಡ ಮಟ್ಟದ ವ್ಯತ್ಯಾಸ ಗೋಚರಿಸುತ್ತಿರಲಿಲ್ಲ. ಮೂಲಸೌಕರ್ಯಗಳಿಲ್ಲದೆ, ಉತ್ತಮ ಬೋಧನಾ ಸಿಬ್ಬಂದಿಯಿಲ್ಲದೆ, ಕೇವಲ ಕಟ್ಟಡವೊಂದನ್ನು ಇಟ್ಟುಕೊಂಡು ಎಂಜಿನಿಯರಿಂಗ್ ಶಿಕ್ಷಣ ನೀಡುವುದಕ್ಕೆ ಪರವಾನಗಿ ಪಡೆಯುವ ಉದ್ಯಮಪತಿಗಳನ್ನು ಎಐಸಿಟಿಇ ನಿಯಂತ್ರಿಸದೆ ಇದ್ದುದರಿಂದ ಈಗ ವಿದ್ಯಾರ್ಥಿಗಳೇ ಅಂತಹ ಕಾಲೇಜುಗಳನ್ನು ದೂರವಿಟ್ಟು 'ಕ್ರಮ' ಕೈಗೊಂಡಿದ್ದಾರೆ. ಇದು ಆಗಲೇಬೇಕಿದ್ದ ಬೆಳವಣಿಗೆ. ಮತ್ತು ಎಐಸಿಟಿಇ ವಿಫಲವಾದ ಜಾಗದಲ್ಲಿ ವ್ಯವಸ್ಥೆಯೇ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಸಮತೋಲನವನ್ನು ಸೃಷ್ಟಿಸುತ್ತಿದೆ.

ಡೀಮ್ಡ್ ವಿವಿಗಳು, ಖಾಸಗಿ ವಿವಿಗಳು ಹಾಗೂ ಯುಜಿಸಿ ಅಡಿ ಬರುವ ವಿವಿಗಳಲ್ಲೂ ಎಂಜಿನಿಯರಿಂಗ್ ಶಿಕ್ಷಣ ನೀಡಲಾಗುತ್ತದೆ. ಅಲ್ಲಿನ ಕೋರ್ಸುಗಳಿಗೆ ಬೇಡಿಕೆ ಇದೆ. ಅವುಗಳ ಹೊರತಾಗಿ ತಲೆಯೆತ್ತಿರುವ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಕುಸಿಯುತ್ತಿದೆ. ಮುಂದಿನ ಬಾರಿ ಪರವಾನಗಿ ನವೀಕರಣಗೊಳಿಸುವಾಗ ಎಐಸಿಟಿಇ ಸರಿಯಾಗಿ ಪರಿಶೀಲನೆ ನಡೆಸಿ, ಈ ಬಾರಿ ಶೂನ್ಯ ಪ್ರವೇಶ ದಾಖಲಾದ ಕಾಲೇಜುಗಳನ್ನು ವಿಶೇಷವಾಗಿ ಗಮನಿಸಿ, ಯೋಗ್ಯ ಕಾಲೇಜುಗಳಿಗೆ ಮಾತ್ರ ಅನುಮತಿ ನೀಡಿದರೆ, ಮಾಹಿತಿ ಇಲ್ಲದೆ ಪ್ರವೇಶ ಪಡೆದು ವಂಚಿತರಾಗುವ ವಿದ್ಯಾರ್ಥಿಗಳ ಪಡಿಪಾಟಲನ್ನು ತಪ್ಪಿಸಿದಂತಾಗುತ್ತದೆ. ಅದರ ಜೊತೆಗೆ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆಯುವ ಸುಲಿಗೆಯನ್ನು ತಪ್ಪಿಸುವುದಕ್ಕೂ ಕ್ರಮ ಕೈಗೊಂಡರೆ ವಿದ್ಯಾರ್ಥಿಗಳ ಹಿತ ರಕ್ಷಿಸಿದಂತಾಗುತ್ತದೆ.

Group Tours - All Inclusive Packages
- Singapore-Malaysia-Thailand 20 Oct / 12 Nov - 7/11 Days
- Jordan - Israel - Turkey 7 Oct - 10 Days
- Dubai - Abu Dhabi 7 Oct/10 Nov/12 Dec - 5 Days
APNA HOLIDAYS Udupi. 9164 34 9876 Mlore. 9164 36 9876

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಆಗಸ್ಟ್ 23, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 1

CENTRAL LIBRARY

# ಕಾಲೇಜುಗಳಲ್ಲೂ ಇನ್ನು ಜಂಕ್ ಫುಡ್‌ಗೆ ನಿಷೇಧ

**ಹೊಸದಿಲ್ಲಿ, ಆ. 22: ಈ ತನಕ ಶಾಲೆಗಳಲ್ಲಷ್ಟೇ ಜಂಕ್ ಫುಡ್‌ಗಳಿಗೆ ನಿಷೇಧವಿತ್ತು. ಇನ್ನು ದೇಶಾದ್ಯಂತ ಎಲ್ಲ ಕಾಲೇಜುಗಳಲ್ಲೂ ಜಂಕ್ ಆಹಾರಗಳು ಬಂದ್ ಆಗಲಿವೆ.**



ವಿವಿಗಳು, ಉನ್ನತ ಶಿಕ್ಷಣ ಸಂಸ್ಥೆಗಳ ಕ್ಯಾಂಪಸ್‌ನಲ್ಲಿ ಜಂಕ್ ಆಹಾರದ ಮಾರಾಟ ನಿಷೇಧಿಸುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಆದೇಶ ಹೊರಡಿಸಿದೆ. ಕಾಲೇಜುಗಳಲ್ಲಿ ಜಂಕ್ ಆಹಾರಗಳನ್ನು ನಿಷೇಧಿಸುವುದರಿಂದ ಆರೋಗ್ಯಕರ ಆಹಾರಕ್ಕೆ ಹೊಸ ಮಾನದಂಡ ನಿಗದಿಯಾಗಲಿದೆ. ವಿದ್ಯಾರ್ಥಿಗಳಲ್ಲಿ ಬೊಜ್ಜಿನ ಮಟ್ಟ ತಗ್ಗಿ ಉತ್ತಮ ಜೀವನ ಸಾಗಿಸಲು ಸಾಧ್ಯ. ಜೀವನ ಶೈಲಿ ಕಾಯಿಲೆಗಳನ್ನು ಇದು ತಡೆಯ ಲಿದೆ ಎಂದು ಯುಜಿಸಿ ತನ್ನ ಸುತ್ತೋಲೆಯಲ್ಲಿ ಹೇಳಿದೆ. ಮಾನವ ಸಂಪನ್ಮೂಲ ಸಚಿವಾಲಯದ ಸೂಚನೆ ಮೇರೆಗೆ ಯುಜಿಸಿಯು ಜಂಕ್ ಫುಡ್ ನಿಷೇಧಿಸಿ ಆದೇಶ ಹೊರಡಿಸಿದೆ.

ಈ ಹಿಂದೆ ಸಿಬಿಎಸ್‌ಇ ಕೂಡ ಶಾಲೆಗಳ ಕ್ಯಾಂಟೀನ್ ಮೆನುವಿನಿಂದ ಜಂಕ್ ಆಹಾರ ಕಿತ್ತುಹಾಕುವಂತೆ ಸೂಚಿಸಿತ್ತು. ಜತೆಗೆ ಮಕ್ಕಳ ಊಟದ ಡಬ್ಬಿಯಲ್ಲೂ ಆರೋಗ್ಯಕರ ಆಹಾರವೇ ಇರುವಂತೆ ಶಾಲೆಗಳು ನೋಡಿಕೊಳ್ಳಬೇಕು ಎಂದೂ ನಿರ್ದೇಶಿಸಲಾಗಿತ್ತು.

₹ 5
ಸಂಪುಟ: 3 ಸಂಚಿಕೆ: 222 ಪುಟಗಳು: 12+4
23.08.2018 ಗುರುವಾರ
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್



ನೆಹರು, ಇಂದಿರಾ, ರಾಜೀವ್ ಅವರ 37 ವರ್ಷಗಳ ಅಧಿಕಾರ ಅವಧಿಯಲ್ಲಿ ಒಂದು ವರ್ಷ ಮಾತ್ರ ಪ್ರತಿಪಕ್ಷ ನಾಯಕರಿದ್ದರು!
ನೂರೆಂಟು ವಿಶ್ವ 6

ದಾರಿದೀಪೋಕ್ತಿ
ಬದುಕು ನೀವು ಎಣಿಸಿದಂತೆ ಇರುವುದಿಲ್ಲ, ಅನಿರೀಕ್ಷಿತ ಘಟನೆಗಳು ಆಗಾಗ ಸಂಭವಿಸುತ್ತಲೇ ಇರುತ್ತವೆ. ಅವುಗಳಿಗೆ ಹೆದರಬಾರದು. ನಮ್ಮ ಗ್ರಹಗತಿಗೆ ಕೊರಗಬಾರದು. ಕಾರಣ ಎಲ್ಲರ ಬದುಕೂ ಹೀಗೇ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

CENTRAL LIBRARY

ಮೂರನೇ ಟೆಸ್ಟ್ ಪಂದ್ಯದಲ್ಲಿ ಭಾರತಕ್ಕೆ 203 ರನ್‌ಗಳಿಂದ ಗೆಲುವು
ಕೊನೆಗೂ ಭಾರತಕ್ಕೆ ಒಲಿದ ಜಯ 12

# ಸಿಇಟಿ V/S ನೀಟ್ ಸೃಷ್ಟಿಸಿರುವ ತಾಕಲಾಟ

## ವಿಶ್ಲೇಷಣೆ

ಗೊರೂರು ಶಿವೇಶ್
editoped@vishwavani.news

ಸರ್ವಶಿಕ್ಷಣ ಅಭಿಯಾನ, ಎಲ್ಲಾ ಮಕ್ಕಳಿಗೂ ಸಮನಾದ ಅವಕಾಶ, ಸಮನಾದ ಶಿಕ್ಷಣಕ್ಕಾಗಿ 2001 ರಿಂದ 2010 ರವರೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ನಡೆಸಿದ ಅತಿ ದೊಡ್ಡಮಟ್ಟದ ಅಭಿಯಾನ. ಇದಕ್ಕಾಗಿ ಸಹಸ್ರ ಸಹಸ್ರ ಕೋಟಿಗಳಷ್ಟು ಹಣ ಬಿಡುಗಡೆಯಾಗಿದೆ. ಆದರೆ ಇಂದಿಗೂ ಗ್ರಾಮೀಣ ಹಿನ್ನೆಲೆಯ ಬಡ ಮಕ್ಕಳು, ನಗರ, ಮೆಟ್ರೋಪಾಲಿಟಿನ್ ಪ್ರದೇಶಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗಿದೆಯೇ ಎಂಬ ಪ್ರಶ್ನೆಗೆ ನಿರಾಸಾದಾಯಕ ಉತ್ತರವೇ ಸಿಗುತ್ತದೆ. ನಗರ ಪ್ರದೇಶದ ವಿದ್ಯಾರ್ಥಿಗಳೊಂದಿಗೆ ಸೆಣಸಲಾಗದೆ ಗ್ರಾಮೀಣ ವಿದ್ಯಾರ್ಥಿಗಳು ಹತಾಶರಾಗುತ್ತಿದ್ದಾರೆ. ಅದಕ್ಕೆ ಇತ್ತೀಚಿನ ಉದಾಹರಣೆ ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಮತ್ತು ನೀಟ್ ಪರೀಕ್ಷೆಗಳು. ಸಿಇಟಿ ಈಗ ಕೇವಲ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಸೀಮಿತವಾದ ನಂತರ ಅದರ ಮಹತ್ವ ಕಡಿಮೆಯಾಗಿದೆ.

ಕರ್ನಾಟಕದ ಸರಕಾರವು KEA (ಕರ್ನಾಟಕ ಪರೀಕ್ಷಾ ಪ್ರಾಧಿಕಾರ)ವನ್ನು ಸ್ಥಾಪಿಸಿದ ನಂತರ ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ, ಆಯುರ್ವೇದದ ಸೀಟಿನ ಹಂಚಿಕೆಯನ್ನು ಸಿಇಟಿ ಮೂಲಕ ನಡೆಸಲು ನಿರ್ಧರಿಸಿದ್ದ ಸಂದರ್ಭದಲ್ಲಿ ಆಗ ನಗರಪ್ರದೇಶಗಳಲ್ಲಿ ಇದಕ್ಕಾಗಿ ಕೋಚಿಂಗ್ ಸೆಂಟರ್‌ಗಳು ಆರಂಭವಾಗಿ ಗ್ರಾಮೀಣ, ತಾಲ್ಲೂಕು ಕೇಂದ್ರದ ವಿದ್ಯಾರ್ಥಿಗಳು ಪಿ.ಯೂ.ಸಿಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದರೂ, ಸಿ.ಇ.ಟಿಯಲ್ಲಿ ಕಡಿಮೆ ಅಂಕಗಳನ್ನು ಪಡೆದು ಕಡಿಮೆ ರ‍್ಯಾಂಕ್ ಪಡೆದ ಕಾರಣ ಅತ್ಯುತ್ತಮ ಸೌಲಭ್ಯವುಳ್ಳ ಕಾಲೇಜನ್ನು ಸೇರುವ ಅವಕಾಶದಿಂದ ವಂಚಿತರಾದರು. ಆದರೂ ದ್ವಿತೀಯ ಪಿ.ಯೂ.ಸಿ ಪರೀಕ್ಷೆಯಲ್ಲಿ ಪಿ.ಸಿ.ಎಂ.ಬಿ. ಯಲ್ಲಿ ಪಡೆದ ಅಂಕಗಳ ಶೇ 50 ರಷ್ಟು ಅಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದ ಕಾರಣ ಪ್ರತಿಭಾವಂತ ವಿದ್ಯಾರ್ಥಿಗಳು ಪರಿಶ್ರಮದ ಮೂಲಕ ಮೆಡಿಕಲ್ ಹಾಗೂ ಎಂಜಿನಿಯರಿಂಗ್ ಸೀಟ್ ಪಡೆಯಲು ಸಾಧ್ಯವಿತ್ತು.

2000 ರಿಂದ 2010ರವರೆಗಿನ ಅವಧಿಯಲ್ಲಿ ಅನೇಕ ಖಾಸಗಿ ಕಾಲೇಜುಗಳು, ಹಣವುಳ್ಳ ವ್ಯಕ್ತಿಗಳು ಹತ್ತಾರು ಎಕರೆ ಪ್ರದೇಶದಲ್ಲಿ ಸುಸಜ್ಜಿತ ಎಂಜಿನಿಯರಿಂಗ್ ಕಾಲೇಜು ಆರಂಭಿಸಿದ ಪರಿಣಾಮ ಕರ್ನಾಟಕ ಒಂದರಲ್ಲಿಯೆ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಕೋಟಾ ಅಡಿಯಲ್ಲಿ ಅವಕಾಶ ಪಡೆದು ಅಭ್ಯಾಸ ನಡೆಸಲು ಸಾಧ್ಯವಾಯಿತು. ಅದರಿಂದಾಗಿ ಬೇಡಿಕೆಗಿಂತ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆದು ಹೊರಬಂದು ಇಂದು ಲಕ್ಷಾಂತರ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಉದ್ಯೋಗವಂಚಿತರಾಗಿದ್ದಾರೆ.

2013ರಲ್ಲಿ ಕೇಂದ್ರವು ನೀಟ್ (ನ್ಯಾಷನಲ್ ಎಲಿಜಬಿಲಿಟಿ ಕಮ್ ಎಂಟ್ರೆನ್ಸ್ ಟೆಸ್ಟ್)ನ್ನು ಆರಂಭಿಸಿ ಅದರ ಮೂಲಕ ಮೆಡಿಕಲ್ ಸೀಟನ್ನು ತುಂಬಲು ಹೊರಟಾಗ ಬಹಳಷ್ಟು ಸರಕಾರಗಳು ಅದರ ವಿರುದ್ಧ ತಡೆಯಾಜ್ಞೆ ತಂದು ತಮ್ಮದೆ ವಿಧಾನಗಳಲ್ಲಿ ಪ್ರವೇಶಾತಿ ನೀಡಿದವು. ಇದಕ್ಕೆ ರಾಜ್ಯ ಹಾಗೂ ಕೇಂದ್ರ ಪಠ್ಯಕ್ರಮದಲ್ಲಿ ಬದಲಾವಣೆ ಇದ್ದದ್ದು ಒಂದು ಕಾರಣವಾದರೆ ನೀಟ್‌ನ ಕ್ಲಿಷ್ಟತೆ ಮತ್ತೊಂದು ಕಾರಣ. ಮುಂದೆ ಸುದೀರ್ಘ ವಿಚಾರಣೆ ನಡೆದು, ಭಿನ್ನ ತೀರ್ಪ ಹೊರಬಿತ್ತು. ನಂತರ ಸುಪ್ರೀಂಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠದೆದುರು ಅದು ವಿಚಾರಣೆಗೆ ಬಂದು, ನೀಟ್‌ನ್ನು ಎತ್ತಿಹಿಡಿದ ಪರಿಣಾಮ ಎಲ್ಲಾ ರಾಜ್ಯಗಳು ನೀಟ್‌ನ ಮೂಲಕ ಸೀಟು ಹಂಚುವುದು ಅನಿವಾರ್ಯವಾಯಿತು.

ನೀಟ್‌ನ ನಿಯಮದಂತೆ ಶೇ. 15 ರಷ್ಟು ಕಾಲೇಜುಗಳ ಸೀಟನ್ನು ರಾಷ್ಟ್ರೀಯ ಮಟ್ಟದಲ್ಲಿ ಗಳಿಸುವ ರ‍್ಯಾಂಕಿಂಗ್ ಮೂಲಕ ರಾಷ್ಟ್ರಮಟ್ಟದಲ್ಲಿ ತುಂಬಲಾಗುತ್ತಿದೆ. ಇನ್ನುಳಿದ ಶೇ. 85 ರಷ್ಟನ್ನು ರಾಜ್ಯ ಸರಕಾರಗಳು ಆ ರಾಜ್ಯದ ವಿದ್ಯಾರ್ಥಿಗಳಿಗೆ ಅದೇ ರ‍್ಯಾಂಕಿಂಗ್‌ನ್ನು ಬಳಸಿ ತುಂಬುತ್ತಿವೆ. ಪಿ.ಯೂ. ಪರೀಕ್ಷೆಗೆ ಈಗ ಸಿ.ಬಿ.ಎಸ್.ಇ ಪಠ್ಯಕ್ರಮವನ್ನು ತಂದಿದೆಯಾದರೂ ಮೊದಲ ಒಂದೆರಡು ವರ್ಷಗಳು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬ್ಲೋ-ಅಪ್ ಸಿಲಬಸ್ (ಕೆಲವು ಕಠಿಣಪಠ್ಯವನ್ನು ಹೊರತುಪಡಿಸಿದ) ಹಾಗೂ ಛಾಯ್ಸ್ ಬೇಸ್ಡ್ ಎಕ್ಸಾಂ (ಐದು ಪ್ರಶ್ನೆಗಳಿಗೆ ಮೂರು ಪ್ರಶ್ನೆಗಳನ್ನು ಉತ್ತರಿಸುವ) ನ್ನು ತಂದ ಪ್ರಯುಕ್ತ ಪಿ.ಯೂ ಫಲಿತಾಂಶ ಸುಧಾರಿಸಿತು. ಆದರೂ ನೀಟ್ ಪರೀಕ್ಷೆಯಲ್ಲಿ, ನಿಗದಿತ 3 ಗಂಟೆ ಅವಧಿಯಲ್ಲಿ, ಪ್ರಶ್ನೆಪತ್ರಿಕೆಯಲ್ಲಿರುವ ಬಹು ಆಯ್ಕೆ ಉತ್ತರದ ಎಲ್ಲ 180 ಪ್ರಶ್ನೆಗಳನ್ನೂ ಉತ್ತರಿಸುವ ಸವಾಲು ಎದುರಿಸಲು ಗ್ರಾಮೀಣ ವಿದ್ಯಾರ್ಥಿಗಳು ಸೋಲುತ್ತಿದ್ದಾರೆ.

ಇಂದು ನೀಟ್‌ಗೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಗಮನಿಸಿದರೆ ತಾಲ್ಲೂಕು, ಜಿಲ್ಲಾಕೇಂದ್ರಗಳಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳ ಸಾಧನೆ ತೀರಾ ಕಡಿಮೆ ಇದೆ. ಬಹುತೇಕ ವಿದ್ಯಾರ್ಥಿಗಳು ಪಿ.ಯೂ.ಸಿ ಪರೀಕ್ಷೆಯನ್ನು ನೆಪಮಾತ್ರಕ್ಕೆ ಬರೆದು, ರಾಜಧಾನಿಯಲ್ಲಿ ಆರಂಭವಾಗಿರುವ ಕೆಲವು ರಾಷ್ಟ್ರಮಟ್ಟದ ಕೋಚಿಂಗ್ ಟ್ಯೂಷನ್ ಸೆಂಟರ್‌ಗಳು ಲಕ್ಷಾಂತರ ರು. ಶುಲ್ಕ ವಸೂಲಿ ಮಾಡಿ ನೀಡುವ ಪ್ರತ್ಯೇಕ ನೀಟ್ ಕೋಚಿಂಗಿಗೆ ಸೇರುತ್ತಿದ್ದಾರೆ. ಆ ತರಬೇತಿ ಪಡೆದವರೇ ಈಗ ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಂಕಗಳಿಸುವುದರ ಮೂಲಕ ಮೆಡಿಕಲ್ ಸೀಟ್ ಗಿಟ್ಟಿಸುತ್ತಿದ್ದಾರೆ.

ಇದಕ್ಕೆ ಪರಿಹಾರವಿದೆಯೇ? ಖಂಡಿತ ಇದೆ. ಕೇಂದ್ರ ಸರಕಾರ ನಡೆಸುವ NATA (ಡ್ರಾಯಿಂಗ್) ಪರೀಕ್ಷೆಯಲ್ಲಿ ಶೇ50ರಷ್ಟು ಅಂಕಗಳು ಅದಕ್ಕೆ ಸಂಬಂಧಿಸಿದ ಪಿ.ಯೂ. ಪರೀಕ್ಷೆಯ ಭೌತಶಾಸ್ತ್ರ, ಗಣಿತ ವಿಷಯಗಳಲ್ಲಿ ತೆಗೆದುಕೊಂಡ ಅಂಕಗಳನ್ನು ಪರಿಗಣಿಸಲಾಗುತ್ತಿದೆ. ನೀಟ್ ಮತ್ತು ಎಂಜಿನಿಯರಿಂಗ್ IIT ಕಾಲೇಜುಗಳಿಗಾಗಿ (JEE main)ನ ಪರೀಕ್ಷೆಯ ಜೊತೆಗೆ ಪಿ.ಯೂ ಪರೀಕ್ಷೆಯ ಶೇ 50 ರಷ್ಟು ಅಂಕಗಳನ್ನು ಪರಿಗಣಿಸಿದರೆ ಪಿ.ಯೂ. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಹಾಯವಾಗಲಿದೆ. ಇನ್ನು ನೀಟ್ ಪರೀಕ್ಷೆಯಲ್ಲಿ ಪ್ರತಿ ವಿಷಯಗಳಿಗೂ ಮಿನಿಮಮ್ ಅಂಕಗಳನ್ನು ನಿಗದಿಪಡಿಸದ ಕಾರಣ ಕೆಲವು ವಿಷಯಗಳಲ್ಲಿ ಐದರಿಂದ ಹತ್ತು ಅಂಕ ಪಡೆದವರು ಉಳಿದ ವಿಷಯಗಳಲ್ಲಿ ಹೆಚ್ಚು ಅಂಕ ಪಡೆದು, ಕಟ್ ಆಫ್‌ನ ಕನಿಷ್ಠ ಅಂಕ ಪಡೆದು ಖಾಸಗಿ ಕಾಲೇಜುಗಳಲ್ಲಿ ಡೊನೇಷನ್ ನೀಡಿ ಪ್ರವೇಶ ಪಡೆಯಲು ಅರ್ಹತೆ ಪಡೆಯುತ್ತಿದ್ದಾರೆ.

ಪ್ರಾಂತೀಯ ಭಾಷೆಗಳಲ್ಲಿ ನೀಟ್‌ನ್ನು ಉತ್ತರಿಸುವ ಅವಕಾಶವನ್ನೇನೋ ನೀಡಲಾಗಿದೆ. ಆದರೆ ಪಶ್ನೆಪತ್ರಿಕೆ ತಯಾರಿಕೆಯ ಅನುವಾದದಲ್ಲಿನ ಗೊಂದಲ ಹಾಗೂ ಪ್ರಶ್ನೆಗಳ ಮುದ್ರಣ ದೋಷದಿಂದಾಗಿ ತಮಿಳ್ನಾಡಿನಲ್ಲಿ ತಮಿಳು ಭಾಷೆಯಲ್ಲಿ ಬರೆದ ವಿದ್ಯಾರ್ಥಿಗಳಿಗೆ 196 ಅಂಕಗಳನ್ನು ಗ್ರೇಸ್ ರೂಪದಲ್ಲಿ ನೀಡಬೇಕಾಗಿ ಬಂದಿರುವುದು ಮತ್ತೊಂದು ವಿಪರ್ಯಾಸದ ಸಂಗತಿ. ನೀಟ್ ಪರೀಕ್ಷೆ ಇದ್ದರೂ ಇಂದಿಗೂ AIIMS ಹಾಗೂ ಪಾಂಡಿಚೆರಿಯ Jipmer ಗೆ ಪ್ರತ್ಯೇಕ ಪರೀಕ್ಷೆಗಳಿದ್ದು ಅನೇಕ ಖಾಸಗಿ ವಿಶ್ವವಿದ್ಯಾಲಯಗಳು (ಡೀಮ್ಡ್) ತಮ್ಮ ಕಾಲೇಜಿಗೆ ಬೇರೆಯದೇ ಪರೀಕ್ಷೆ ನಡೆಸಿ ದಾಖಲು ಮಾಡಿಕೊಳ್ಳುತ್ತಿವೆ. ಇದೆಲ್ಲವೂ ಮೂಲ ಆಶಯವನ್ನು ಬದಲಾಯಿಸುತ್ತಿರುವುದರಿಂದ ಇವೆಲ್ಲವಕ್ಕೂ ನುರಿತ ಶಿಕ್ಷಣ ತಜ್ಞರ ಸಮಿತಿಯ ಮೂಲಕ ಪರಿಹಾರ ಕಂಡುಕೊಳ್ಳಬೇಕಾಗಿದೆ.